(ಇಂದು ದಿನಾಂಕ:04-06-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

<u>ಪಾಟೀ ಸವಾಲುಃ ಎದುರುದಾರ ನಂ.**3** ರವರ ಪರ ಶ್ರೀ ಪಿ ಎಚ್ ಎಮ್ ವಕೀಲರಿಂದ.</u>

1. ಅಪಘಾತವು ದಿಃ 13-04-2025 ರಂದು ಆಗಿರುತ್ತದೆ. ನಾನು ಪಲ್ಸರ್ ಮೋ.ಸೈ. ನಂ. ಕೆಎ 37 ಬಿ 4831 ನೇದ್ದರಲ್ಲಿ ಹಿಂಬದಿ ಸವಾರನಾಗಿ ಬರುತ್ತಿದ್ದೆ. ಸದರಿ ಮೋ.ಸೈ. ನ್ನು ದೇವರಾಜ ಎನ್ನುವವರು ನಡೆಸುತ್ತಿದ್ದರು. ದೇವರಾಜ ಎನ್ನುವವರು ಸದರಿ ಮೋ.ಸೈ. ನ್ನು ಅತೀವೇಗದಿಂದ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತದ ದಿನ ದೇವರಾಜ ಎನ್ನುವವರು ಮದ್ಯಪಾನ ಮಾಡಿದ್ದರು ಎಂದರೆ ಸರಿಯಲ್ಲ. ಪೋಲೀಸರು ಸದರಿ ದೇವರಾಜ ಇವರ ವಿರುದ್ದ ದೋ.ಪ ಯಲ್ಲಿ ಕಲಂ.185, 129, 177 ಮೋ.ವಾ ಕಾಯ್ದೆ ಮತ್ತು ಕಲಂ.281, 125(ಬಿ) ಅಡಿಯಲ್ಲಿ ದೋ.ಪ. ಸಲ್ಲಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಅರ್ಜಿಯಲ್ಲಿ ದೇವರಾಜ ಎನ್ನುವವರನ್ನು ನಾನು 2 ನೇ ಎದುರುದಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ.

2. ಸದರಿ ಅಪಘಾತದ ನಂತರ ನಾನು ರೇಣುಕಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಅಗಷ್ಟ್ ತಿಂಗಳಲ್ಲಿ ಗಂಗಾವತಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಗಂಗಾವತಿಯ ಆಸ್ಪತ್ರೆಯಲ್ಲಿ ನನ್ನ ಕಾಲಿಗೆ ಮೊದಲಿನ ಶಸ್ತ್ರ ಚಿಕಿತ್ಸೆ ಯಶಸ್ಸು ಆಗದ ಕಾರಣ ನನ್ನ ಕಾಲಿನ ಮೊಣಕಾಲಿನ ಕೆಳಭಾಗವನ್ನು ಕತ್ತರಿಸಿರುತ್ತಾರೆ. ನನ್ನ ಕಾಲು ಕತ್ತರಿಸಿದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಿಲ್ಲುಗಳು ಕೈಯಿಂದ ಬರೆದ ಬಿಲ್ಲುಗಳು ಇರುತ್ತವೆ ಎಂದರೆ ಸರಿ. ಸದರಿ ಬಿಲ್ಲುಗಳನ್ನು ನಾನು ಸೃಷ್ಟಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಡಿಗೆ ಹಿಡಿದುಕೊಂಡು ನಡೆಯಬಲ್ಲೆ ಎಂದರೆ ಸರಿ.

3. ನಿಪಿ-11 ನ್ನು ನಾನು ಪರಿಹಾರ ಪಡೆಯಲು ಸೃಷ್ಟಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ಆಸ್ಪತ್ರೆಯ ಬಿಲ್ಲುಗಳಿಗೂ ಮತ್ತು ವೈದ್ಯರ ಸಲಹಾ ಚೀಟಿಗಳಿಗೂ ಒಂದಕ್ಕೊಂದು ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

4. ಅಪಘಾತದ ದಿನ ನಾನು ಮತ್ತು ದೇವರಾಜ ರವರು ಸಹ ಹೆಲ್ಮೆಟ್ ಹಾಕಿರುವುದಿಲ್ಲ ಎಂದರೆ ಸರಿ. ದೇವರಾಜರವರ ತಪ್ಪಿನಿಂದ ಅಪಘಾತವಾಗಿರುತ್ತದೆ ಹಾಗಾಗಿ ಅವರೇ ಪರಿಹಾರ ಕೊಡಲು ಬಾದ್ಯಸ್ಥರು ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ.

5. ಎದುರುದಾರ ನಂ.1 ಇವರ ವಾಹನದ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ನಂ.1 ರವರು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು